**ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಛೇರಿ,**
**ಐವಾನ್-ಇ-ಷಾಹಿ ಬಡಾವಣೆ ಹತ್ತಿರ ಕಲಬುರಗಿ**

ಸಂಖ್ಯೆ: ಸಿ1(1) ಆಡಳಿತ ಸಾವರ್ಗಾವಣೆ/06/2025-26 ದಿನಾಂಕ: 12.06.2025

ಜ್ಞಾಪನ

ವಿಷಯ:- ಶಾಲಾ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಾರ್ವತ್ರಿಕ ವರ್ಗಾವಣೆಯ ಕೌನ್ಸಲಿಂಗ್ ಬಗ್ಗೆ.

><><><><

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2025-26 ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆಯ ಬೋಧಕೇತರ ಗ್ರೂಪ್-ಸಿ ಮತ್ತು ಡಿ ವೃಂದಗಳ ವರ್ಗಾವಣೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿದ ನೌಕರರು ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಯ ಕೇಂದ್ರಗಳಲ್ಲಿಯೇ ಕೌನ್ಸಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ.

ಅರ್ಹ ಅರ್ಜಿದಾರರು ವರ್ಗಾವಣೆಯ ಕೌನ್ಸಲಿಂಗ್ ಪ್ರಕ್ರಿಯೆಗೆ ದಿನಾಂಕ: 13.06.2025ರಂದು ಕಲಬುರಗಿ ಜಿಲ್ಲೆಯ ನೌಕರರು ಅಪರ ಆಯುಕ್ತರ ಕಛೇರಿ, ಕಲಬುರಗಿ ಹಾಗೂ ಉಳಿದ ಜಿಲ್ಲೆಯ ನೌಕರರು ಉಪ ನಿರ್ದೇಶಕರ ಕಛೇರಿಗಳಲ್ಲಿ ಹಾಜರಾಗಿ, ಆನ್‌ಲೈನ್ ಕೌನ್ಸಲಿಂಗನಲ್ಲಿ ನಿಯಮನುಸಾರ ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.

**(ಎ. ಹನುಮಕ್ಕ)**
ಸಹ ನಿರ್ದೇಶಕರು (ಆಡಳಿತ)
ಅಪರ ಆಯುಕ್ತರ ಪರವಾಗಿ

ಇವರಿಗೆ ಮುಂದಿನ ಕ್ರಮಕ್ಕಾಗಿ:

1. ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, [ಸಿ.ಟಿ.ಇ] ಕಲಬುರಗಿ (ತಮ್ಮ ವ್ಯಾಪ್ತಿಗೆ ಬರುವ ವರ್ಗಾವಣೆ ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು [ಆಡಳಿತ] ಇವರಿಗೆ ಕಳುಹಿಸಲು ತಿಳಿಸಿದೆ)
2. ಕಲಬುರಗಿ ವಿಭಾಗದ ಎಲ್ಲಾ ಉಪ ನಿರ್ದೇಶಕರು [ಆಡಳಿತ] ಶಾಲಾ ಶಿಕ್ಷಣ ಇಲಾಖೆ,
3. ಕಲಬುರಗಿ ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು,ಶಾಲಾ ಶಿಕ್ಷಣ ಇಲಾಖೆ
4. ಈ ಕಛೇರಿಯ ಇ-ಆಡಳಿತ ಘಟಕಕ್ಕೆ ನೀಡುತ್ತಾ ವರ್ಗಾವಣೆ ಮಾರ್ಗಸೂಚಿಯನ್ನು ಕಛೇರಿಯ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
5. ಸಂಬಂಧಿಸಿದ ವರ್ಗಾವಣೆ ಕೋರಿರುವ ಎಲ್ಲಾ ಸಿಬ್ಬಂದಿಗಳಿಗೆ

ಪ್ರತಿಗಳನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.